ಆಯುರ್ವೇದ ಎನ್ನುವುದು ಭಾರತೀಯ ಚಿಕಿತ್ಸಾ ಪದ್ಧತಿ. ಕೆಲವರಿಗೆ ಆಯುರ್ವೇದ ಅಂದ್ರೆ ಮನೆ ಮದ್ದು; ಇನ್ನು ಕೆಲವರಿಗೆ ಆಯರ್ವೇದ ಅಂದರೆ ಪಂಚಕರ್ಮ. ಮತ್ತೆ ಕೆಲವರಿಗೆ ಅದು ಗಿಡಮೂಲಿಕೆಗಳ (ಹರ್ಬಲ್) ಚಿಕಿತ್ಸೆ.

ಆದರೆ ಆಯುರ್ವೇದದ ಬಗ್ಗೆ ಹೀಗೆ ನಾವು ತಿಳಿದುಕೊಂಡಿರುವುದು ಅರ್ಧ ಸತ್ಯ. 3–4 ದಶಕಗಳ ಹಿಂದೆ ಜನಸಾಮಾನ್ಯರಲ್ಲಿ ವೈದ್ಯಶಾಸ್ತ್ರದ ಬಗ್ಗೆ ಒಂದು ಭಾವನೆ ವ್ಯಾಪಕವಾಗಿತ್ತು– ಯಾವುದೇ ಕಾಯಿಲೆ ಇರಲಿ, ಆಧುನಿಕ ವೈದ್ಯಪದ್ಧತಿಯಿಂದ ಚಿಕಿತ್ಸೆ ಮಾಡಿದರೆ ತಕ್ಷಣ ಗುಣವಾಗುತ್ತದೆ; ಆಯುರ್ವೇದ ಔಷಧಿ ತೆಗೆದುಕೊಂಡರೆ ನಿಧಾನವಾಗಿಯಾದರೂ ಕಾಯಿಲೆ ಬೇರುಸಮೇತ ಗುಣವಾಗುತ್ತದೆ– ಎನ್ನುವುದೇ ಆ ನಂಬಿಕೆ.

ದೀರ್ಘಕಾಲೀನ ಕಾಯಿಲೆಗಳಿಗೆ ಪಂಚಕರ್ಮ ಚಿಕಿತ್ಸೆ ಈಗಲೂ ಉತ್ತಮ ಚಿಕಿತ್ಸಾ ವಿಧಾನವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇತ್ತೀಚೆಗೆ ಆಯುರ್ವೇದ ಕವಲುದಾರಿಯಲ್ಲಿದೆ. ಆಯುರ್ವೇದದ ಹೆಸರಿನಲ್ಲಿ ಏನೆಲ್ಲವೂ ಮಾರಾಟದ ಸರಕುಗಳಾಗುವುದು ಹೆಚ್ಚಿದೆ. ನಗರಗಳಲ್ಲಿ ಹೆಜ್ಜೆ ಹೆಜ್ಜೆಗೂ ಆಯರ್ವೇದದ ಹೆಸರಿನಲ್ಲಿ ಮಸಾಜ್ ಸೆಂಟರ್‌ಗಳು ಹುಟ್ಟಿಕೊಂಡಿವೆ. ಮಸಾಜ್ ಮಾಡಿಕೊಂಡರೆ ಇಷ್ಟೆಲ್ಲ ಕಾಯಿಲೆಗಳು ಗುಣವಾಗುತ್ತವೆ ಎಂದು ಕೆಲವು ಸೆಂಟರ್‌ಗಳಲ್ಲಿ ಬೋರ್ಡ್‌ಗಳನ್ನೇ ಹಾಕಿರುತ್ತಾರೆ. ಎಲ್ಲವೂ ವಾಣಿಜ್ಯೀಕರಣಗೊಂಡಿದೆ. ಅಭ್ಯಂಗವನ್ನು ಮಸಾಜ್ ಹೆಸರಿನಲ್ಲಿ ಮನಬಂದಂತೆ ಹಣ ಗಳಿಕೆಗೆ ಬಳಸುತ್ತಿರುವುದು ಎದ್ದು ಕಾಣುತ್ತಿದೆ. ಸೈಂಧವ ಲವಣ ಬಳಸಿದ ಪಾನಿಪೂರಿಯನ್ನು ಕೆಲವೆಡೆ ಆಯುರ್ವೇದ ಪಾನಿಪೂರಿ ಎಂದು ಕರೆದು, ಅದರಲ್ಲೂ ಹಣ ಮಾಡುವ ದಂಧೆ ನಡೆಯುತ್ತಿದೆ.

ನಿಜಕ್ಕೂ ಆಯುರ್ವೇದ ಅಂದರೆ ಏನು? ಅದು ಎಲ್ಲ ರೋಗಗಳಿಗೂ ರಾಮಬಾಣವೇ? ಎಲ್ಲ ರೀತಿಯ ಕಾಯಿಲೆಗಳಿಗೂ ಅದರಲ್ಲಿ ಚಿಕಿತ್ಸೆ ಇದೆಯೆ? ಆಯುರ್ವೇದ ಮೂಲಬೇರುಗಳು ಎಲ್ಲಿವೆ? ಅದು ಕೆಲಸ ಮಾಡುತ್ತಿರುವ ವಿಧಾನ ಯಾವುದು? ರೋಗ ಬರದಂತೆ ತಡೆಯಲು ಮಾತ್ರ ಆಯುರ್ವೇದ ಬಳಕೆ ಮಾಡಬೇಕೆ.. ಅಥವಾ ರೋಗ ಬಂದ ನಂತರವಷ್ಟೇ ಆಯುರ್ವೇದ ಚಿಕಿತ್ಸೆ ಕೆಲಸ ಮಾಡುತ್ತದೆಯೆ? ಈ ಎಲ್ಲ ಪ್ರಶ್ನೆಗಳೂ ಈಗ ಮಹತ್ವದ್ದು.

ಆಯುರ್ವೇದ ಔಷಧಿಗಳೀಗ ಬಹುರಾಷ್ಟ್ರೀಯ ಕಂಪೆನಿಗಳ ಉತ್ಪನ್ನಗಳಾಗಿ ದುಬಾರಿ ಔಷಧಿಯೂ ಆಗತೊಡಗಿದೆ.



